**ದಿಃ 11.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು – ವಾದಿಯ ಪರ ವಕೀಲರಿಂದ**

ಸಿ.ಬಿ.ಮೂರ್ತಿಯವರ ಜಮೀನಿನ ವಿಚಾರವಾಗಿ ಆದಂತಹ ಗಲಾಟೆಯ ವಿಚಾರದ ಬಾಬ್ತು ನಾನು ಇಲ್ಲಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಹಿಂದಿನ ಹಿಯರಿಂಗ್ ದಿನಾಂಕದಂದೂ ಸಹ ಸಾಕ್ಷ್ಯ ನುಡಿಯಲು ಬಂದಿದ್ದೆ. ಸಿ.ಬಿ.ಮೂರ್ತಿಯವರ ಮಗ ಹರ್ಷ. ಅವರು , ವಿಶ್ವ ಪ್ರಕಾಶ್ ಈ ದಾವೆಯನ್ನು ಸಿ.ಬಿ.ಮೂರ್ತಿಯ ವಿರುದ್ಧ ಯಾವ ಕಾರಣಕ್ಕಾಗಿ ಹೂಡಿರುತ್ತಾರೆ ಎಂದು ತಿಳಿಸಿರುತ್ತಾರೆ.

ಪ್ರಶ್ನೆಃ ಸಿ.ಬಿ.ಮೂರ್ತಿಯವರ ಮಗ ಹರ್ಷ , ವಿಶ್ವ ಪ್ರಕಾಶ್ ಸಿ.ಬಿ. ಮೂರ್ತಿಯ ವಿರುದ್ಧ ಏತಕ್ಕಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಹೇಳಿರುತ್ತಾರೆಯೇ ?

ಉತ್ತರಃ ಹರ್ಷ ರವರು , ನಮ್ಮ ತೋಟದ ಬಾಬ್ತು ಒಬ್ಬ ವ್ಯಕ್ತಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ನನ್ನದು ಎನ್ನುತ್ತಿದ್ದಾನೆ , ಹೀಗಾಗಿ ತೋಟವನ್ನು ಹುಷಾರಾಗಿ ನೋಡಿಕೊಳ್ಳಿ , ಆತ ಯಾವಾಗ ಬೇಕಾದರು ಬಂದು ಗಲಾಟೆ ಮಾಡಬಹುದು ಎಂದು ಹೇಳಿರುತ್ತಾರೆ .

ನಾನು ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುವ ಈ ತೋಟದ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಸಿ.ಬಿ. ಮೂರ್ತಿಯವರು ನಾನು ಆ ತೋಟದ ಮ್ಯಾನೇಜರ್ ಎಂದು ಅಪಾಯಿಂಟ್ ಮೆಂಟ್ ಲೆಟರ್ ನ್ನು ನನಗೆ ನೀಡಿರುವುದಿಲ್ಲ.

ಕಳೆದ 21 ವರ್ಷಗಳಿಂದ ನನಗೆ ಹರ್ಷ ರವರ ಪರಿಚಯ ಇದೆ. ಹರ್ಷ ರವರಿಗೆ ಈಗ ಸುಮಾರು 48 ವರ್ಷ ವಯಸ್ಸಿರಬಹುದು. ನಾನು ಸಿ.ಬಿ. ಮೂರ್ತಿಯವರನ್ನು ಆ ತೋಟದಲ್ಲಿ 5

ವರ್ಷಗಳ ಹಿಂದೆ ನೋಡಿರುತ್ತೇನೆ. ಸಿ.ಬಿ. ಮೂರ್ತಿಯವರಿಗೆ ಈಗ ಆರೋಗ್ಯ ಸರಿ ಇಲ್ಲದೇ ಇರುವುದರಿಂದ ಹೊರಗಡೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ವಿಷಯವನ್ನು ನನಗೆ ನಳಿನಕ್ಕ ತಿಳಿಸಿರುತ್ತಾರೆ. ಎಷ್ಟು ವರ್ಷದಿಂದ ಸಿ ಬಿ ಮೂರ್ತಿಯವರು ಆರೋಗ್ಯ ಸರಿ ಇಲ್ಲದೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

ಸಿ.ಬಿ.ಮೂರ್ತಿಯ ಕುಟುಂಬದ ಬಗ್ಗೆ ನನಗೆ ಗೊತ್ತು. ಸಿ.ಬಿ.ಮೂರ್ತಿಯವರಿಗೆ ಲೀಲಕ್ಕ ಎನ್ನುವ ಸಹೋದರಿ ಇದ್ದಾರೆ. ಉಳಿದಂತೆ ಏನೂ ಗೊತ್ತಿಲ್ಲ. ಸಿ.ಬಿ.ಮೂರ್ತಿಯವರಿಗೆ ಇಬ್ಬರು ಮಕ್ಕಳು ಎನ್ನುವ ವಿಷಯ ಗೊತ್ತು. ಸಾಕ್ಷಿ ಪುನಃ ನುಡಿಯುತ್ತಾರೆ ಅವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು ಇದ್ದಾರೆ. 5 ವರ್ಷದ ಹಿಂದೆ ನಾನು ಸಿ.ಬಿ.ಮೂರ್ತಿಯ ವರನ್ನು ನೋಡಿದಾಗ , ಅವರು ಮೈಸೂರಿನಲ್ಲಿ ವಾಸ ಮಾಡುತ್ತಿದ್ದರು ಎಂದು ತಿಳಿಸಿದ್ದರು. ಲೀಲಕ್ಕ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಲೀಲಕ್ಕ ಯಾವಾಗ ಮೃತ ಪಟ್ಟರು ಎನ್ನುವುದು ನನಗೆ ಗೊತ್ತಿಲ್ಲ. ಆ ತೋಟದಲ್ಲಿ ಯಾವ ಭಾಗ ಸಿ.ಬಿ.ಮೂರ್ತಿಯವರಿಗೆ ಸೇರಿತ್ತು , ಯಾವ ಭಾಗ ಲೀಲಕ್ಕ ರವರಿಗೆ ಸೇರಿತ್ತು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಅವರಿಬ್ಬರು ಸೇರಿ ಆ ತೋಟವನ್ನು ನೋಡಿಕೊಳ್ಳುತ್ತಿದ್ದರು. ಹರ್ಷ ರವರ ಮಾತನ್ನು ಕೇಳಿಕೊಂಡು ನಾನು ವಿಶ್ವ ಪ್ರಕಾಶ್ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೆ ಎನ್ನುವುದು ಸರಿಯಲ್ಲ. ಆ ಬೋರ್ಡ ನ್ನು ತೋಟದಲ್ಲಿ ವಿಶ್ವ ಪ್ರಕಾಶ್ ರವರು ಯಾಕೆ ಹಾಕಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಅದನ್ನು ನಾನು ಹರ್ಷ ರವರ ಮಾತಿನಂತೆ ಕಿತ್ತು ಹಾಕಿದೆ. ಏಕೆಂದರೆ ಹರ್ಪ ರವರು ಆತ ಸದರಿ ತೋಟದ ಬಾಬ್ತು

ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತಾನೆ ಎಂದು ಹೇಳಿದ್ದರು. ಹರ್ಷ ರವರ ಮಾತನ್ನು ಕೇಳಿಕೊಂಡು ಇಂದು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.